# ಕಲ್ಪಿತ ನ್ಯಾಯಾಲಯ ಸ್ಪರ್ಧೆಗೆ ಸಂಬಂಧಿಸಿದ ನಿಯಮಗಳು

**ಸಾಮಾನ್ಯ ನಿಯಮಗಳು:**

1) ಭಾರತದ ವಕೀಲ ಪರಿಷತ್‌ನಿಂದ ಮಾನ್ಯತೆ ಪಡೆದ ಕರ್ನಾಟಕ ರಾಜ್ಯದಲ್ಲಿಯ ಎಲ್ಲ ಕಾನೂನು ಮಹಾವಿದ್ಯಾಲಯಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆಯನ್ನು ಹೊಂದಿರುತ್ತವೆ.

2) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಎಲ್ಲ ಕಾನೂನು ಮಹಾವಿದ್ಯಾಲಯಗಳು, ಇಬ್ಬರು ವಾದ ಮಂಡಿಸುವ ಮತ್ತು ಒಬ್ಬ ಸಂಶೋಧನಾ ವಿದ್ಯಾರ್ಥಿಗಳನ್ನೊಳಗೊಂಡ ಮೂರು ಜನರ ತಂಡವನ್ನು ಸ್ಪರ್ಧೆಗೆ ಕಳುಹಿಸಬೇಕು.

3) ಸ್ಪರ್ಧೆಯು ಪ್ರಾರಂಭವಾಗುವದಕ್ಕಿಂತ ಮುಂಚೆ ವಾದಿ ಮತ್ತು ಪ್ರತಿವಾದಿ ತಂಡಗಳ ಸ್ಪರ್ಧಾ ಪಟ್ಟಿಯನ್ನು ಚೀಟಿ ಎತ್ತುವ ಮೂಲಕ ತಯಾರಿಸಲಾಗುವದು. ನಂತರದ ಹಂತದ ಸ್ಪರ್ಧೆಗೆ 15 ನಿಮಿಷ ಮುಂಚಿತವಾಗಿ ಸ್ಪರ್ಧಾಪಟ್ಟಿಯನ್ನು ತಯಾರಿಸಲಾಗುವದು.

4) ಸಂಘಟಕರು ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಯಾವುದೇ ತಂಡಗಳ ಪ್ರವಾಸ ಖರ್ಚನ್ನು ನೀಡುವದಿಲ್ಲ. ಆದರೆ, ಸ್ಪರ್ಧಾ ದಿನಗಳಂದು ಸ್ಪರ್ಧಾಳುಗಳಿಗೆ ಉಚಿತ ಊಟ ಹಾಗೂ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗುವದು.

5) ಈ ಸ್ಪರ್ಧೆಯನ್ನು ಕನ್ನಡ ಭಾಷೆಯಲ್ಲಿ ನಡೆಸಲಾಗುವದು.

6) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಕಾನೂನು ಮಹಾವಿದ್ಯಾಲಯಗಳು 19.11.2016 ರೊಳಗಾಗಿ ತಮ್ಮ ಭಾಗವಹಿಸುವಿಕೆಯನ್ನು ಖಚಿತಪಡಿಸಬೇಕು.

7) ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ವಿಷಯ ವಸ್ತುವು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಆಸ್ತಿಯಾಗಿದ್ದು, ಅದನ್ನು ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಯಾರೂ ಉಪಯೋಗಿಸುವಂತಿಲ್ಲ.

8) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಕಾನೂನು ಮಹಾವಿದ್ಯಾಲಯಗಳು 19.11.2016 ರೊಳಗೆ ಲಗತ್ತಿಸಿದ ನೊಂದಣಿ ಅರ್ಜಿಯನ್ನು ಪೂರ್ಣ ಮಾಹಿತಿಯೊಂದಿಗೆ ಸಲ್ಲಿಸಬೇಕು.

**ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ಕೆಲವು ವಿಶೇಷ ಗುಣಲಕ್ಷಣಗಳು:**

1) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಪ್ರತಿತಂಡಗಳು ವಾದ ಮತ್ತು ಪ್ರತಿವಾದ ಪತ್ರಗಳನ್ನು ಸಂಘಟಕರಿಗೆ ನೊಂದಣಿ ಸಮಯದಲ್ಲಿ ಸಲ್ಲಿಸಬೇಕು.

2) ಪ್ರತಿ ತಂಡಕ್ಕೆ ಒಟ್ಟು 30 ನಿಮಿಷ ಕಾಲಾವಧಿ ಇದ್ದು, ತಂಡದ ಪ್ರತಿ ಸ್ಪರ್ಧಾಳುವಿಗೆ ವಾದ ಮಂಡಿಸಲು ತಲಾ 15 ನಿಮಿಷ ಕಾಲಾವಕಾಶ ನೀಡಲಾಗುವದು.

3) ಒಟ್ಟು 100 ಅಂಕಗಳ ಆಧಾರದ ಮೇಲೆ ಪ್ರತಿ ತಂಡದ ಸಾಧನೆಯನ್ನು ನಿರ್ಧರಿಸಲಾಗುವದು.

4) ಲಿಖಿತ ವಾದ ಪತ್ರಗಳಿಗೆ ಪ್ರತ್ಯೇಕ 50 ಅಂಕಗಳನ್ನು ನಿಗದಿಪಡಿಸಲಾಗಿದೆ.

5) ಸ್ಪರ್ಧೆಯಲ್ಲಿ ಒಟ್ಟು 4 ಹಂತಗಳಿದ್ದು, ಇದರಲ್ಲಿ ನಿರ್ಗಮಿಸುವ ಸುತ್ತು, ಕ್ವಾರ್ಟರ್ ಫೈನಲ್ಸ್, ಸೆಮಿ ಫೈನಲ್ಸ್ ಮತ್ತು ಫೈನಲ್ ಸುತ್ತುಗಳು ಇರುತ್ತವೆ.

6) ಅ. **ನಿರ್ಗಮಿಸುವ ಸುತ್ತು:** ಚೀಟಿ ಎತ್ತಿದ ಪ್ರಕಾರ ಎಲ್ಲಾ ತಂಡಗಳು ಈ ಸುತ್ತಿನಲ್ಲಿ ಭಾಗವಹಿಸುತ್ತವೆ.

ಬ. **ನಿರ್ಗಮಿಸುವ ಸುತ್ತಿನಿಂದ** 50% ವಾದಿ ಕಡೆಯ ಮತ್ತು 50% ಪ್ರತಿವಾದಿ ಕಡೆಯ ತಂಡಗಳು ಕ್ವಾರ್ಟರ್ ಫೈನಲ್ ಸುತ್ತನ್ನು ತಲುಪುತ್ತಾರೆ.

ಕ. **ಸೆಮಿ ಫೈನಲ್ ಸುತ್ತು** : ಕ್ವಾರ್ಟರ್ ಫೈನಲ್‌ನಲ್ಲಿ ಭಾಗವಹಿಸಿದ ಸ್ಪರ್ಧಾಳುಗಳಲ್ಲಿ ಒಟ್ಟು 4 ತಂಡಗಳು ಅವರು ಪಡೆದ ಅಂಕಗಳ ಆಧಾರದ ಮೇಲೆ ಸೆಮಿ ಫೈನಲ್ ತಲುಪುತ್ತಾರೆ.

ಡ. **ಫೈನಲ್ ಸುತ್ತು:** ಸೆಮಿ ಫೈನಲ್‌ನಲ್ಲಿ ಭಾಗವಹಿಸಿದ ಸ್ಪರ್ಧಾಳುಗಳಲ್ಲಿ ಒಟ್ಟು 2 ತಂಡಗಳು ಅವರು ಪಡೆದ ಅಂಕಗಳ ಆಧಾರದ ಮೇಲೆ ಫೈನಲ್ (ಅಂತಿಮ) ಸುತ್ತನ್ನು ತಲುಪುತ್ತಾರೆ.

**ಲಿಖಿತ ವಾದ ಪತ್ರಗಳನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ ನಿಯಮಗಳು:**

1. ಲಿಖಿತ ವಾದ ಪತ್ರಗಳನ್ನು ಬಾಂಡ್ ಪೇಪರಿನ ಒಂದು ಬದಿಯಲ್ಲಿ ಟೈಪ್ ಮಾಡಿ, ಪ್ರತಿ ಸಾಲುಗಳ ನಡುವೆ (ಡಬಲ್ ಸ್ಪೇಸ್ ಲೈನಿಂಗ್) ಅಂತರ ಇರುವಂತೆ ಸಲ್ಲಿಸತಕ್ಕದ್ದು.
2. ಬರವಣಿಗೆಯು 15 ಪುಟಗಳನ್ನು ಮೀರಿರಬಾರದು. ಅದರಲ್ಲಿ ಮುಖಪುಟ, ಪರಿವಿಡಿ, ಗ್ರಂಥಋಣ ಪಟ್ಟಿ, ಪ್ರಕರಣಗಳ ಪಟ್ಟಿ, ವಾದಗಳ ಸಾರಾಂಶ ವಿವಾದಾಂಶಗಳು/ಪ್ರಶ್ನೆಗಳು ಹಾಗೂ ಅನುಸೂಚಿಗಳು ಸೇರಿರುವುದಿಲ್ಲ.
3. ಲಿಖಿತ ವಾದ ಪತ್ರಗಳನ್ನು ವ್ಯವಸ್ಥಿತವಾಗಿ ಬೈಂಡ್ (ಜೋಡಣೆ) ಮಾಡಿ ಸಲ್ಲಿಸತಕ್ಕದ್ದು.
4. ಒಂದು ಸಲ ಸಲ್ಲಿಸಿದ ಲಿಖಿತ ವಾದ ಪತ್ರಗಳನ್ನು ಹಿಂದಿರುಗಿಸುವುದಿಲ್ಲ.

**ಸಮವಸ್ತ್ರ:** ಭಾರತದ ವಕೀಲ ಪರಿಷತ್ತು ಸೂಚಿಸಿದ ಸಮವಸ್ತ್ರವನ್ನು ಸ್ಪರ್ಧಾಳುಗಳು ಧರಿಸಬೇಕು.

**ಬಹುಮಾನಗಳು:**

1. ವಿಜೇತರು
2. ಎರಡನೇ ಸ್ಥಾನ
3. ಅತ್ಯುತ್ತಮ ವಾದ ಪತ್ರ
4. ಅತ್ಯುತ್ತಮ ಮಹಿಳಾ ನ್ಯಾಯವಾದಿ
5. ಅತ್ಯುತ್ತಮ ಪುರುಷ ನ್ಯಾಯವಾದಿ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

## ರಾಜ್ಯ ಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ'೨೦೧೬

ಸಮಸ್ಯೆ*

# ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಯ, ನವದೆಹಲಿ.

ರಿಟ್ ಅರ್ಜಿ ಸಂಖ್ಯೆ 302/2015

*ಭಾರತಕ್ಕಾಗಿ ನಾವು ಜನಪರ್ಯಾಯದ ಒಂದು ಆಂದೋಲನ (ರಿ)*

*ವಿರುದ್ಧ*

*ಭಾರತದ ಒಕ್ಕೂಟ ಹಾಗೂ ಇತರರು*

> 'ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:
> ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ;
> ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ;
> ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ; . . . .
> ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ'.

ರಾಷ್ಟ್ರೀಯ ಕಾನೂನು ಶಾಲೆಯ ಪ್ರಥಮ ವರ್ಷದ ವಿದ್ಯಾರ್ಥಿನಿಯಾದ ಸಂಸ್ಕೃತಿ ಒಬ್ಬ ಅಸಾಧಾರಣ ಪ್ರತಿಭೆ. ತರಗತಿಯಲ್ಲಿ ಮೊದಲ ದಿನದ ಪಾಠವಾದ ಸಂವಿಧಾನದ ಪ್ರಸ್ತಾವನೆಯನ್ನು ಅರ್ಥಮಾಡಿಕೊಳ್ಳಲು ಸಂಸ್ಕೃತಿಗೆ ಕಷ್ಟವೇನಾಗಲಿಲ್ಲ. ಆದರೆ ಗಂಭೀರವಾಗಿ ಪಾಠ ಕೇಳಿದ ಪರಿಣಾಮ ಆಕೆಗೆ ಬೃಹತ್ ಬಿಡಿಸಲಾಗದ ಸಮಸ್ಯೆಯನ್ನು ಸೃಷ್ಟಿಸಿತು.

ಕಲ್ಯಾಣ ರಾಜ್ಯದ ಸ್ಥಾಪನೆಯ ಉದ್ದೇಶದೊಂದಿಗೆ ಸಮಾಜವಾದಿ ಗಣರಾಜ್ಯ ಸ್ಥಾಪಿಸಿಕೊಂಡ ನಾವುಗಳು ಸರ್ವರಿಗೂ ಸಂಪತ್ತು, ಅವಕಾಶ, ಸವಲತ್ತುಗಳ ಸಮಾನ ಹಂಚಿಕೆಯ ವಿಕೇಂದ್ರಿಕೃತ ಸಮಾಜವಾದಿ ಬದ್ಧತೆಯಿಂದ ದೂರವಾಗಿ, ಅದರ ಸ್ಥಳದಲ್ಲಿಂದು ಕೇಂದ್ರೀಕೃತ ಅರ್ಥವ್ಯವಸ್ಥೆ ಸ್ಥಾಪನೆಗೆ ಪೂರಕವಾದ ದೇಶದೆಲ್ಲೆಡೆ ಬಂಡವಾಳ ತೊಡಗಿಸುವ ಧಣಿಗಳ ಸಮಾವೇಶ. ಅವರುಗಳಿಗೆ ಉದ್ದಿಮೆ ಸ್ಥಾಪಿಸಲು ಆಡಳಿತದ ವತಿಯಿಂದ ಭೂಮಿ, ನೀರು, ವಿದ್ಯುತ್, ರಿಯಾಯತಿ, ಸೋಡಿ ಮುಂತಾಗಿ ಸಕಲ ಸವಲತ್ತಿನ ಕೆಂಪುರತ್ನಗಂಬಳಿ. ಹೆಸರಿಗೆ ಮಾತ್ರ ಎಂಬಂತೆ ಜನಸಾಮಾನ್ಯರಿಗೆ ಕೆಲವಷ್ಟು ತೋರಿಕೆಯ ಜನಪ್ರಿಯ ಪಂಚಿಕೆಗಳನ್ನು ಹೊರತುಪಡಿಸಿದರೆ ಇಂದು ನೀರು, ಆಹಾರ, ಆರೋಗ್ಯ, ಶಿಕ್ಷಣ ಮೊದಲು ಮಾಡಿ ಎಲ್ಲ ಸೌಲಭ್ಯ/ ಅವಕಾಶಗಳು ಕೇವಲ ಉಳ್ಳವರಿಗೆ ಮಾತ್ರ, ಬ್ರಿಟೀಷ್ ವಸಾಹತು ನೀತಿಯನ್ನು

---

* ಕರ್ನಾಟಕರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಆಯೋಜಿಸಿದ ನಾಲ್ಕನೇ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ 2016 ಕ್ಕಾಗಿ ಶ್ರೀ.ಬಸವಪ್ರಭು ಹೊಸಕೇರಿ, ನ್ಯಾಯಮೂರ್ತಿಗಳು, ಧಾರವಾಡ ಇವರು ಈ ಸಮಸ್ಯೆಯನ್ನು ಬರೆದಿರುವರು.

ವಿರೋಧಿಸಿದ ನಾವುಗಳು ಪ್ರಜಾತಂತ್ರ ಹೆಸರಿನಲ್ಲಿ ಅದಕ್ಕಿಂತ ಅಪಾಯಕಾರಿ ಸ್ಥಿತಿಯೆಡೆಗೆ ಸಾಗುತ್ತಿದ್ದೇವೆ ಎಂಬುದು ಸಂಸ್ಕೃತಿಯ ವಿಶ್ಲೇಷಣೆ.

ಸರ್ವಧರ್ಮ ಸಮಭಾವದ ಆಡಳಿತ ನಮ್ಮದಾದರೂ ಬಹುತೇಕ ಸಂಧರ್ಭಗಳಲ್ಲಿ ಬಹುಸಂಖ್ಯಾತರ ವಿಧಿ–ವಿಧಾನಗಳನ್ವಯದ ಪೂಜೆ–ಪುನಸ್ಕಾರಗಳೊಂದಿಗೆ ಸರಕಾರದ ಅಧಿಕೃತ ಸಮಾರಂಭಗಳು ಜರುಗುತ್ತಿವೆ. ಸರ್ಕಾರಿ ಸ್ವತ್ತುಗಳಲ್ಲಿ ಅಕ್ರಮವಾಗಿ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಸ್ಪರ್ಧೆಗಿಳಿದಂತೆ ತಮ್ಮ –ತಮ್ಮ ಪೂಜೆ. ಪ್ರಾರ್ಥನಾ ಸ್ಥಳಗಳನ್ನು ಸ್ಥಾಪಿಸಿಕೊಂಡಿದ್ದಾರೆ.

ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದೊಂದಿದೆಯಾದರೂ ಹೆಚ್ಚಿನ ಮಾಧ್ಯಮಗಳಿಂದು ಕಾರ್ಪೋರೇಟ ಸಂಸ್ಥೆಗಳ/ಬಲಾಢ್ಯರ ಒಡೆತನದಲ್ಲಿರುವವರಿಂದ ಅವರುಗಳ ರಾಜಕೀಯ ನಿಲುವಿಗೆ ಹೊಂದಿಕೆಯಾಗುವ ವಿಚಾರಗಳಿಗೆ ಮಾತ್ರ ಪ್ರಕಟಣೆಯ ಕೃಪೆ. ಹೀಗಾಗಿ ಸಾಮಾನ್ಯರ ಅಭಿವ್ಯಕ್ತಿ ಎನ್ನುವದು ಮುಕ್ತವಾಗೇನೂ ಉಳಿದಿಲ್ಲ. ಪ್ರತಿಯಾಗಿ ಪ್ರಬಲರ ವೈಚಾರಿಕತೆಯೆ ಸರಿ ಎಂಬ ನಿಲುವು ಸಾರ್ವತ್ರಿಕವಾಗಿದೆ.

ಸಂಚಾರ ಸ್ವಾತಂತ್ರದ್ದೊಂದು ವಿಭಿನ್ನ ಕಥೆ. ಊರಿಂದೂರಿಗೆ ಪ್ರಯಾಣಿಸಲು ರಸ್ತೆ ನಿರ್ವಹಣಾ ಸುಂಕ ಕಡ್ಡಾಯವಾಗಿ ತೆರಲೇಬೇಕು. ಇಲ್ಲದಿದ್ದರೆ ಅನಿವಾರ್ಯವಾಗಿ ರಸ್ತೆಯೆಂದು ಕರೆಯಿಸಿಕೊಳ್ಳುವ ದಾರಿಯಲ್ಲಿ ಪ್ರಯಾಣಿಸಬೇಕು.

ಉನ್ನತ/ ವೃತ್ತಿ ಶಿಕ್ಷಣ ಕೇವಲ ಉಳ್ಳವರ ಸ್ವತ್ತಾಗಿ, ಶಿಕ್ಷಣ ಎಂಬುದು ಜನಸಾಮಾನ್ಯರಿಗಷ್ಟೇ ಅಲ್ಲ, ಮಧ್ಯಮ ವರ್ಗದವರಿಗೂ ಮರಿಚೀಕೆಯಾಗಿದೆ.

ಭಾರತದ ರಾಜಕೀಯ ಸ್ವಾತಂತ್ರ್ಯ ಅರ್ಧಶತಮಾನ ಆಚರಿಸುತ್ತಿರುವಾಗ ನಾವುಗಳು ಉದಾರೀಕರಣ, ಖಾಸಗೀಕರಣ ಮತ್ತು ವಿಶ್ವೀಕರಣಕ್ಕೆ ಒಳಗಾಗಲು ನಮ್ಮ ಸಂವಿಧಾನದ ಬಹುತೇಕ ಆಶೋತ್ತರಗಳಿಗೆ ಎಳ್ಳು–ನೀರು ಬಿಟ್ಟು. ಅನಿವಾರ್ಯತೆಯ ಹೆಸರಿನಲ್ಲಿ ಬಂಡವಾಳಶಾಹಿ ಅರ್ಥವ್ಯವಸ್ಥೆಯನ್ನು ಸಂಸತ್ತಿನಲ್ಲಾಗಲಿ, ರಾಜ್ಯಗಳ ವಿಧಾನಮಂಡಳಗಳಲ್ಲಾಗಲಿ ಯಾವುದೇ ಪ್ರಸ್ತಾಪ, ಮಂಡನೆ, ಚರ್ಚೆ, ನಿರ್ಣಯವನ್ನು ಮಾಡದೇ, ಪ್ರಸ್ತುತ ಯಾವ ಕಾನೂನುಗಳಿಗೂ ತಿದ್ದುಪಡಿ ತರದೇ, ಕೇವಲ ಆಡಳಿತದ ಧೋರಣೆ / ನೀತಿ ಎಂಬುದಾಗಿ LPG ಒಪ್ಪಿದ ನಂತರವಂತೂ ಭಾರತೀಯರ ಬದುಕು ಅಸಹನೀಯವಾಗಿದ್ದು ಪರಿಣಾಮ ಹಳ್ಳಿಗಳು ವೃದ್ಧಾಶ್ರಮವಾಗಿ ಪರಿವರ್ತನೆಗೊಂಡಿದ್ದು, ಯುವಕರು ಪಟ್ಟಣ ಸೇರಿದ್ದಾರೆ ಇಲ್ಲವೇ ಸೇರುತ್ತಿದ್ದಾರೆ.

ಸಂವಿಧಾನವನ್ನು ಕಾಪಾಡುವ ಪ್ರತಿಜ್ಞೆ ಮಾಡುವ ನಮ್ಮ ಜನಪ್ರತಿನಿಧಿಗಳು ಚುನಾವಣೆ ಸಂದರ್ಭಗಳಲ್ಲೆಲ್ಲಾ ರಾಜಾರೋಷವಾಗಿ ಜಾತಿ, ಹಣ, ಸ್ವಜನ ಪಕ್ಷಪಾತ ಮಾಡಿ ಆಯ್ಕೆ ಆಗುವದು ಸರ್ವೆಸಾಮಾನ್ಯ. ನಂತರ ಶಾಸನ ಸಭೆಗಳಲ್ಲಿ ಹಾಜರಾಗದ, ಭಾಗವಹಿಸದ ಸಂದರ್ಭಗಳೇ ಹೆಚ್ಚು. ಶಾಸಕರುಗಳು ಇಂದು ಕಾರ್ಪೋರೇಟ ಕೆಲಸಗಾರರಿಗೆ ಪ್ರತಿಸ್ಪರ್ಧಿ ಎಂಬಂತೆ ಅಧಿಕೃತವಾಗಿಯೇ ಸಂಬಳ, ಸವಲತ್ತು, ಅವಕಾಶಗಳನ್ನು ಪಡೆಯುತ್ತಿದ್ದಾರೆ. ಹಣವೊಂದಿದ್ದರೆ ಯಾರನ್ನಾರದರೂ ಯಾರೂ ಗೆಲ್ಲಬಹುದೆಂಬ ವಾತಾವರಣ ನಿರ್ಮಾಣವಾಗಿದೆ.

ಅಭಿವೃದ್ಧಿಯ ಹೆಸರಿನಲ್ಲಿ ನಿಸರ್ಗ ಸಂಪತ್ತಿನ ನಿರಂತರ ದುರ್ಬಳಕೆಯಿಂದಾಗಿ ಬರ ಇಲ್ಲವೆ ಪ್ರವಾಹ, ಹವಾಮಾನದ ವೈಪರಿತ್ಯ, ಕೃಷಿಪರಿಕರಗಳು, ಬೆಂಬಲಬೆಲೆ, ಬೆಳೆವಿಮೆಗಳ ಅಲಭ್ಯತೆ ಹೀಗೆ ಹನುಮ ಬಾಲದ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ ರೈತ ಸಮುದಾಯ ಅನಿವಾರ್ಯವಾಗಿ ಸರಣಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಚಿಕ್ಕ-ಪುಟ್ಟ ವ್ಯಾಪಾರ, ಕುಲಕಸುಬುಗಳು, ಗುಡಿ-ಕೈಗಾರಿಕೆಗಳು ಮಾಯವಾಗಿ ಧುತ್ತೆಂದು ಬೃಹತ್ ಮಾಲ್‌ಗಳು/ ಉತ್ಪಾದನಾ ಕೇಂದ್ರಗಳು ಎಲ್ಲೆಡೆ ತಲೆಯೆತ್ತತೊಡಗಿ ಎಲ್ಲೆಂದರಲ್ಲಿ ನಿರುದ್ಯೋಗ ರಾರಾಜಿಸತೊಡಗಿದೆ. ಅಷ್ಟಾಗಿಯೂ ದೇಶದ ಜಿಡಿಪಿ ಉನ್ನತ ಮಟ್ಟದಲ್ಲಿದೆ, ನಾವು ಅಭಿವೃದ್ಧಿಯ ಮುಂಚೂಣಿಯಲ್ಲಿದ್ದೇವೆ ಎಂಬ ಪ್ರಚಾರ ಸಾರ್ವತ್ರಿಕವಾಗಿ ಶ್ರೀಸಾಮಾನ್ಯನ ಬದುಕನ್ನು ಅಣಕಿಸುವಂತಿದೆ. ಅನಾದಿಕಾಲದಿಂದ ಅನ್ನ, ನೀರು ಸ್ವತ್ತಾಗದ ಈ ದೇಶದಲ್ಲಿ ಇಂದು ದಿನನಿತ್ಯದ ಆಹಾರ ಧಾನ್ಯಗಳು ಜನಸಾಮಾನ್ಯರ ಕೈಗೆಟುಕುವ ಮಟ್ಟದಿಂದ ದೂರ ಸಾಗಿವೆ.

ದೇಶವೆಂದರೆ ಸಂಪತ್ತು, ಸಾಮಗ್ರಿಗಳ ಕ್ರೋಢೀಕರಣ ಮಾತ್ರವಲ್ಲ. ಬದಲಾಗಿ, ಸರ್ವರ ಅದರಲ್ಲೂ ವಿಶೇಷವಾಗಿ ದುರ್ಬಲರ ಸಬಲೀಕರಣ ಎಂಬುದನ್ನು ಮರೆತ ನಮ್ಮ ವ್ಯವಸ್ಥೆ, ನೌಕರರಿಗಾದರೆ ಲಕ್ಷ ರೂಪಾಯಿಗಳ ಸಂಬಳ, ತುಟ್ಟಿಭತ್ತೆ, ಪಿಂಚಣಿ, ಅದೇ ಶ್ರಮಿಕರಿಗಾದರೆ ಊಟಕ್ಕೆ ಸಾಲದ ಜುಜುಬಿ ಕೂಲಿಯ ತಾರತಮ್ಯದ ನೀತಿಯು ನೀಗಿಸಲಾಗದ ಅಸಮಾನತೆಯ ಕಂದಕವನ್ನು ನಿರ್ಮಿಸಿದೆ. ಸಾಮಾಜಿಕ ನ್ಯಾಯ ನಿರಾಕರಿಸುವ ಖಾಸಗೀಕರಣ, ನಿರುದ್ಯೋಗ ಸೃಷ್ಟಿಸುವ ಯಾಂತ್ರೀಕರಣ, ಹಲವರನ್ನು ಹತ್ತಿಕ್ಕಿ, ಕೆಲವರನ್ನೇ ಸಂಪತ್ತಿನ ಕೇಂದ್ರವಾಗಿಸುವ ಉದಾರೀಕರಣವನ್ನು ಪ್ರೋತ್ಸಾಹಿಸುತ್ತಿರುವುದು ಯಾವುದೇ ದೃಷ್ಟಿಕೋನದಿಂದ ನಮ್ಮ ಗಣತಂತ್ರದ ಆಶಯಗಳಿಗೆ ಪೂರಕವಲ್ಲ.
ಬಹುಶಃ ಈ ಕಾರಣಕ್ಕಾಗಿಯೇ ಚರ್ಚಿಲ್ ಭಾರತೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎಂಬ ಅವಹೇಳನಕಾರಿ ಆದರೆ ನಿಜ ಮಾತೊಂದನ್ನು ಹೇಳಿರಬಹುದು.

ಮೂಲಭೂತ ಹಕ್ಕುಗಳ ಸಾರಾಸಗಟಾದ ಉಲ್ಲಂಘನೆ ಒತ್ತಟ್ಟಿಗಿರಲಿ, ಮನುಷ್ಯನ ಅಸ್ತಿತ್ವವನ್ನೇ ಅಲುಗಾಡಿಸುವ ಇಂತಹ ವಿನಾಶಕಾರಿ ಬೆಳವಣಿಗೆಗಳಿಂದ ತೀವ್ರ ನೊಂದಿರುವ ಸಂಸ್ಕೃತಿ ತನ್ನ ಶಕ್ತ್ಯಾನುಸಾರ ಆಸಕ್ತರೊಡಗೂಡಿ ಕೇಂದ್ರ, ರಾಜ್ಯ ಸರಕಾರಗಳ ಕಾರ್ಯದರ್ಶಿಗಳಿಗೆ, ಮಂತ್ರಿಮಹೋದಯರಿಗೆ ಪ್ರಶ್ನಿಸಿ ಸಂವಿಧಾನ ವಿರೋಧಿ ಬೆಳವಣಿಗೆಯ ಕೆಡಕುಗಳನ್ನು ಗಮನಕ್ಕೆ ತಂದರೂ ಯಾರಿಂದಲೂ ಅಧಿಕೃತ ಉತ್ತರ ಲಭ್ಯವಿಲ್ಲ. ಬದಲಾಗಿ ಸಂಸ್ಕೃತಿಯ ಪ್ರಶ್ನೆಗೆ ಖಾಸಗಿ ಮಾತುಕತೆಯಲ್ಲಿ ರಾಜಕೀಯ ಮುಖಂಡರು, ಅಧಿಕಾರಿಗಳು ಉತ್ತರದ ಬದಲಾಗಿ 'ವಿಶ್ವದ ಎಲ್ಲ ದೇಶಗಳು ಒಪ್ಪಿರುವ ವಾಣಿಜ್ಯ ವ್ಯವಹಾರ ನೀತಿಯಿಂದ ಭಾರತ ಮಾತ್ರ ಪ್ರತ್ಯೇಕವಾಗಲು ಹೇಗೆ ಸಾಧ್ಯ'? ಎಂಬ ಪ್ರಶ್ನೆಯನ್ನೇ ಮುಂದಿಡುತ್ತಾರೆ.

ಪ್ರಸ್ತುತ ಆಡಳಿತವು ಸಂವಿಧಾನದ ಪ್ರಸ್ತಾವನೆಯ ಯಾವ ಗುಣಲಕ್ಷಣಗಳೂ ಹೊಂದಿಲ್ಲವೆಂಬ ಪ್ರಜ್ಞೆ ಶಿಕ್ಷಿತರೆಲ್ಲರಿಗೂ ಇದ್ದರೂ ಒಂದಿಲ್ಲೊಂದು ಕಾರಣಕ್ಕೆ ಅವರೆಲ್ಲ ನಿಸ್ಸಹಾಯಕರು. ಪ್ರಶ್ನಿಸಿದರೇ ನೌಕರಿ ಕಳೆದುಹೋಗುವದೆಂಬ ಭಯ ಕೆಲವರಿಗೆ. ಇನ್ನುಳಿದವರಿಗೆ ನಮಗ್ಯಾಕೆ ಈ ಉಸಾಬರಿ ಎಂಬ ನಿರ್ಲಕ್ಷ. ಮತ್ತೆ ಕೆಲವರದು ಪ್ರಶ್ನೆ ಮಾಡುವುದರಿಂದ ನಮಗೇನು ಪ್ರಯೋಜನ ಎಂಬ ಲೆಕ್ಕಾಚಾರ.

ಸಧ್ಯದ ಸ್ಥಿತಿಗೆ ದೇಶದ ಆ ಪಕ್ಷ ಈ ಪಕ್ಷ ಗಳನ್ನು ದೂರುವದಲ್ಲ. ಬದಲಾಗಿ ನಾವು ನಮ್ಮ ನಡೆಯ ಕುರಿತಾದ ಆತ್ಮನಿರೀಕ್ಷಣೆ ಮಾಡಿಕೊಳ್ಳವ ಸಮಯವಿದು. ಇಷ್ಟೆಲ್ಲ ಅನಾಚಾರಕ್ಕೆ ಅವಕಾಶ ಮಾಡಿಕೊಟ್ಟಿರುವ ನಮ್ಮ ಎಲ್ಲ ಆಳುವ ಪಕ್ಷಗಳು ಸಂವಿಧಾನದ ಮೂಲ ಚೌಕಟ್ಟಿನಿಂದ (Basic Structure of the Constitution) ಆಚೆ ನಮ್ಮ ನೀತಿ ನಿರೂಪಣೆ ಮಾಡ ತೊಡಗಿ ಸ್ವಾತಂತ್ರ್ಯದ ಆಶೋತ್ತರಗಳು

ಸಾರಾಸಗಟಾಗಿ ನಿರಾಕರಿಸಲ್ಪಟ್ಟಿರುವ ಸಮಯದಲ್ಲೂ ನಮ್ಮ ನ್ಯಾಯಾಂಗವು ತನ್ನ ಕ್ರಿಯಾಶೀಲತೆಯ ಮಧ್ಯೆಯೂ ತೆಪ್ಪಗಿರುವುದು ಸೋಜಿಗದ ಸಂಗತಿ.

ಪ್ರಸ್ತುತ ಕೇಂದ್ರ ಮತ್ತು ಎಲ್ಲ ರಾಜ್ಯಗಳ ನಡೆ, ನೀತಿ, ಸಿದ್ಧಾಂತ, ಧೋರಣೆ ನಮ್ಮ ಸಂವಿಧಾನದ ಆಶೋತ್ತರಗಳಿಗೆ ವ್ಯತಿರಿಕ್ತವಾಗಿವೆ ಎಂಬ ತಿಳುವಳಿಕೆ ಇದ್ದಾಗ್ಯೂ, ಸರ್ವೋಚ್ಚ ನ್ಯಾಯಾಲಯ ಸಂವಿಧಾನದ ಪರಮೋಚ್ಚ ಸಂರಕ್ಷಕ ಸಂಸ್ಥೆಯಾಗಿ ಇವೆಲ್ಲವನ್ನು ಪ್ರಶ್ನಿಸದಿದ್ದರೆ ಭವಿಷ್ಯದ ಭಾರತದಲ್ಲಿ 'ಕಾನೂನಿನ ಅಧಿಪತ್ಯ' ಎಂಬುದಕ್ಕೆ ಅರ್ಥವೇ ಉಳಿಯಲಿಕ್ಕಿಲ್ಲ.

ಆಡಳಿತದ ಧೋರಣೆ / ಪಾಲಿಸಿ ವಿಷಯಕ್ಕೆ ನ್ಯಾಯಾಂಗ ಹಸ್ತಕ್ಷೇಪ ಮಾಡದು ಎಂಬ ಸಿದ್ಧ ಸೂತ್ರ ಸಂವಿಧಾನದ ಆಶಯಕ್ಕೆ ವ್ಯತಿರಿಕ್ತ ಸಂದರ್ಭಗಳಲ್ಲೂ ಊರ್ಜಿತವೆ? ನ್ಯಾಯಾಲಯ ಇಂತಹ ಗಂಭೀರ ಸಂದರ್ಭಗಳಲ್ಲೂ ತಾನು ಆಡಳಿತ, ಶಾಸನಗಳಲ್ಲಿ ಹಸ್ತಕ್ಷೇಪ ಮಾಡಲಾಗದು ಎಂಬ ಮಡಿವಂತಿಕೆಗೆ ಕಟ್ಟುಬಿದ್ದರೆ ಅದರ ಅಸ್ತಿತ್ವಕ್ಕೆ ಏನು ಬೆಲೆ ? ಎಂಬೆಲ್ಲ ಪ್ರಶ್ನೆಗಳೊಂದಿಗೆ ಸಧ್ಯದ ಆಡಳಿತದ ಧೋರಣೆಗಳು ಸಮಾಜವಾದ, ಜಾತ್ಯಾತೀತತೆ, ಆರ್ಥಿಕ-ಸಾಮಾಜಿಕ ಸ್ವಾತಂತ್ರ್ಯ, ಗಣತಂತ್ರ ಮುಂತಾಗಿ ಪ್ರಜಾರಾಜ್ಯದ ಆಶಯಗಳಿಗೆ ವ್ಯತಿರಿಕ್ತವಾದ್ದರಿಂದ ತಕ್ಷಣದಿಂದ ಕೇಂದ್ರ ರಾಜ್ಯಗಳು ಸಂವಿಧಾನಕ್ಕೆ ಪೂರಕವಾಗಿ ತಮ್ಮ ಧೋರಣಗಳನ್ನು ಬದಲಾಯಿಸಲು ನಿರ್ದೇಶನ ನೀಡಲು ಕೋರಿ ಸಂಸ್ಕೃತಿ ಸಮಾನಮನಸ್ಕ ಚಿಂತಕರ ವೇದಿಕೆಯಾದ ಭಾರತಕ್ಕಾಗಿ ನಾವು ಸಂಸ್ಥೆಯ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿಯ ರಿಟ್ ದಾಖಲಿಸಿದ್ದಾರೆ.

ರಿಟ್ ಅರ್ಜಿಯನ್ನು ಅಂತಿಮ ವಾದ ವಿವಾದಕ್ಕಾಗಿ ನಿಗದಿಪಡಿಸಲಾಗಿದೆ.